**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 04 ಡಿವಿಪಿ (1) 2015.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 30-09-2015.

**: ಜ್ಞಾಪನ :**

**ವಿಷಯ:** Funds for Registration to become Centralized Placement Cell (CPC) member of VTU

**ಉಲ್ಲೇಖ:**
1. ಪ್ರಿನ್ಸಿಪಾಲರು, ಸರ್ಕಾರಿ ಇಂಜಿ. ಕಾಲೇಜು, ಹಾಸನ ಇವರ ಪತ್ರ ಸಂಖ್ಯೆ: ಸಇಕಾಹಾ/25/ಕಟ್ಟಡ/2014-15 ದಿ 29-07-2015
2. ಪ್ರಿನ್ಸಿಪಾಲರು, ಸರ್ಕಾರಿ ಇಂಜಿ. ಕಾಲೇಜು, ಕೆ.ಆರ್.ಪೇಟೆ ಇವರ ಪತ್ರ ಸಂಖ್ಯೆ: GECKRP/Store/Placement/2015-16/225 ದಿನಾಂಕ 28-08-2015

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಪತ್ರಗಳಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರುಗಳು 2015-16 ನೇ ಶೈಕ್ಷಣಿಕ ವರ್ಷದಲ್ಲಿ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ರವರು ವಿದ್ಯಾರ್ಥಿಗಳಿಗೆ ಉತ್ತರ ರೀತಿಯಲ್ಲಿ ಉದ್ಯೋಗಾವಕಾಶಗಳನ್ನು ದೊರಕಿಸಿಕೊಡಲು ವಲಯವಾರು ಪ್ರಾದೇಶಿಕ ಕಛೇರಿಗಳನ್ನು ತೆರೆಯುವುದರ ಮೂಲಕ, ಆ ವಲಯದಲ್ಲಿ ಬರುವ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳನ್ನು ಒಂದೆಡೆ ಸೇರಿಸಿ ಉದ್ಯೋಗಾವಕಾಶಗಳನ್ನು Centralized Placement Cell (CPC) ಮುಖಾಂತರ ಅನುಕೂಲ ಮಾಡಿಕೊಡಲು ತೀರ್ಮಾನಿಸಿದ್ದು, ಇಲ್ಲಿಗೆ ನೇರವಾಗಿ ಹಲವಾರು ಪ್ರಖ್ಯಾತ ಕಂಪನಿಗಳು ಭಾಗವಹಿಸಲಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಉದ್ಯೋಗ ಪಡೆಯುವಲ್ಲಿ ಅನುಕೂಲವಾಗುವುದೆಂದು ಹಾಗೂ ಈ ಕಾರ್ಯಕ್ರಮಕ್ಕೆ ಭಾಗವಹಿಸಲು ಪ್ರತಿ ಸಂಸ್ಥೆಗಳು ರೂ. 35,000/- ನೀಡಿ ನೊಂದಾಯಿಸ ಬೇಕಿದ್ದು, ಇದಕ್ಕೆ ಅನುಮತಿಯನ್ನು ನೀಡಲು ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರುಗಳ ತರಬೇತಿ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವ Centralized Placement Cell (CPC) ಈ ಕಾರ್ಯಕ್ರಮಕ್ಕೆ ವಿ.ಟಿ.ಯು, ಬೆಳಗಾವಿ ಯವರೊಂದಿಗೆ ನೊಂದಣಿ ಮಾಡಿಕೊಳ್ಳಲು ಅಗತ್ಯವಿರುವ ರೂ. 35,000/- (ರೂಪಾಯಿ ಮೂವತ್ತೈದು ಸಾವಿರಗಳು ಮಾತ್ರ) ಗಳನ್ನು 2015-16 ನೇ ಸಾಲಿನ ಲೆಕ್ಕ ಶೀರ್ಷಿಕೆ 2203-00-105-0-01-051-ಸಾಮಾನ್ಯ ವೆಚ್ಚಗಳಡಿ ಭರಿಸಲು ಅನುಮತಿಯನ್ನು ನೀಡಿ ಆದೇಶಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

1) ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
2) e-Governance ವಿಭಾಗಕ್ಕೆ - Website ನಲ್ಲಿ ಅಪ್‌ಲೋಡ್ ಮಾಡಲು